# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆಃ** 5015/2022 ಫ್ರಾಸಾ-04
ಚಾಸಾ-04

ದಿನಾಂಕಃ 18-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಪುಟ್ಟತಾಯಮ್ಮ |
| **ತಂದೆಯ / ಗಂಡನ ಹೆಸರು** | ರಮೇಶ್ |
| **ವಯಸ್ಸು** | 41 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ಬಂಡಿಪಾಳ್ಯ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ರಮೇಶ ನನ್ನ ಗಂಡ, ನನಗೆ ಒಂದು ಗಂಡು , ಒಂದು ಹೆಣ್ಣು ಮಕ್ಕಳು ಅವರುಗಳು ಲಕ್ಷ್ಮೀಕಾಂತ ಮತ್ತು ದೀಪಿಕ.

ಸುಮಾರು 3 ವರ್ಷಗಳ ಹಿಂದೆ ಮದ್ಯಾಹ್ನ 3-30 ಗಂಟೆಗೆ ಆರೋಪಿ ರಾಮಯ್ಯ ಹನುಮಂತರಾಯಪ್ಪ ರವರ ಮನೆ ಹಿಂದೆ ಬೈದುಕೊಳ್ಳುತ್ತಿದ್ದ. ಆರೋಪಿ ರಾಧಳನ್ನು ನಾಗೇಶ ಎನ್ನುವವರಿಗೆ ಕೊಟ್ಟು ಮದುವೆ ಮಾಡುತ್ತೇವೆ ಎಂದು ಯಾವ ಸೂಳೆ ಮಕ್ಕಳು ಹೇಳಿದ್ದಿರಾ ಬರ್ರಿ ಎಂದು ಬೈಯ್ಯುತ್ತಿದ್ದ ಆಗ ರಮೇಶ ಯ್ಯಾಕೆ ಬೈದುಕೊಳ್ಳುತ್ತಿದ್ದಿಯಾ ಎಂದು ಕೇಳಿದಾಗ ನೀನೇ ರಾಧಳನ್ನು ನಾಗೇಶನಿಗೆ ಕೊಟ್ಟು ಮದುವೆ ಮಾಡುತ್ತಿಯಾ ಎಂದು ಹೇಳಿದ್ದಿಯಾ ಎಂದಾಗ ರಮೇಶ ನಾನು ಯ್ಯಾಕೆ ಹೇಳುತ್ತೇನೆ ನನ್ನ ಅಣ್ಣನ ಮಗಳಿಗೆ ನಾನು ಯ್ಯಾಕೆ ಹಾಗೆ ಹೇಳುತ್ತೇನೆ ಅಂದಿದ್ದಕ್ಕೆ ಆರೋಪಿ ನೀನೇ ಹೇಳಿದ್ದಿಯಾ ಸೂಳೆ ಮಗನೆ ಎಂದು ಅಲ್ಲೆ ಬಿದ್ದಿರುವ ದೊಣ್ಣೆಯನ್ನು ತೆಗೆದುಕೊಂಡು ನನ್ನ ಗಂಡನ ತಲೆಯ ಹಿಂಭಾಗಕ್ಕೆ ಎರಡು ಸಾರಿ

ಹೊಡೆದಿರುತ್ತಾನೆ. ರಮೇಶನನ್ನು ಆರೋಪಿ ತಳ್ಳಿದ್ದರಿಂದ ಕೆಳಕ್ಕೆ ಬಿದ್ದಿದ್ದು ತಲೆಗೆ, ಬಲಕಣ್ಣಿನ ಹತ್ತಿರ ಪೆಟ್ಟಾಗಿರುತ್ತದೆ. ಆ ಸಮಯದಲ್ಲಿ ಶ್ವೇತಾ ಮತ್ತು ಪುಟ್ಟಮ್ಮ ಅವರು ಹೋಗಿ ರಮೇಶನನ್ನು ಎತ್ತಿ ಕೂರಿಸಿ ನೀರು ಕುಡಿಸಿರುತ್ತಾರೆ. ಚಾಸಾ-1 ರಿಂದ 3 ರವರು ನನ್ನ ಗಂಡನನ್ನು ಎತ್ತಿಕೊಂಡು ನಮ್ಮ ಮನೆ ಹತ್ತಿರ ಕರೆದುಕೊಂಡು ಬಂದಿರುತ್ತಾರೆ. ನಾವು ಆಸ್ಪತ್ರೆಗೆ ಕಾರಿನಲ್ಲಿ ತುಮಕೂರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ತುಮಕೂರು ಆಸ್ಪತ್ರೆಯಲ್ಲಿ ಆಗುವುದಿಲ್ಲ ನಿಮಾನ್ಸ್ ಗೆ ಕರೆದುಕೊಂಡು ಹೋಗಿ ಎಂದು ಹೇಳಿದ್ದರಿಂದ ನಾವು ನಿಮಾನ್ಸ್‌ಗೆ ಕರೆದುಕೊಂಡು ಹೋಗಿದ್ದು ನಿಮಾನ್ಸ್ ನಲ್ಲಿ ಆಗುವುದಿಲ್ಲ ಎಂದು ಹೇಳಿದ್ದರಿಂದ ದಿಗ್ವಿಜಯ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಘಟನೆಯಾದ 5 ದಿವಸಕ್ಕೆ ನನ್ನ ಗಂಡ ತೀರಿಕೊಂಡಿರುತ್ತಾನೆ.

ಸದರಿ ಆಸ್ಪತ್ರೆಯಲ್ಲಿ ನನ್ನ ಗಂಡನ ಬಟ್ಟೆಯನ್ನು ಕಟ್ ಮಾಡಿ ಕೊಟ್ಟಿರುತ್ತಾರೆ. 6 ನೇ ತಾರೀಖಿಗೆ ನನ್ನ ಗಂಡನ ಬಟ್ಟೆಯನ್ನು ಬಡವನಹಳ್ಳಿ ಪೊಲೀಸ್ ಠಾಣೆಯಲ್ಲಿ ಕೊಟ್ಟಿರುತ್ತೇನೆ. ಪೊಲೀಸ್ ಠಾಣೆಯಲ್ಲಿ ಪೊಲೀಸರು ನನ್ನ ಸಹಿ ತೆಗೆದುಕೊಂಡು ಪೊಟೋ ತೆಗೆಸಿರುತ್ತಾರೆ. ನ್ಯಾಯಾಲಯದಲ್ಲಿರುವ ಅಮಾನತ್ತು ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-13 ಎಂದು, ಸಾಕ್ಷಿ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಪೊಟೋವನ್ನು ನೋಡಿದ್ದು, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ, ಸದರಿ ಪೊಟೋವನ್ನು ನಿಪಿ-14 ಎಂದು ಗುರುತಿಸಲಾಯಿತು. ನಾನು ಪೊಲೀಸರ ಮುಂದೆ ನನ್ನ ಗಂಡನ ಟೀ ಶರ್ಟ್ ಮತ್ತು ಬರ್ಮುಡಾ ಕೊಟ್ಟಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಎರಡು ಬಿಳಿ ಬಟ್ಟೆಯ ಪ್ಯಾಕ್ ಹಾಜರುಮಾಡಿದ್ದು ಅವುಗಳ ಮೇಲೆ ಸೀಲ್ ಸುಸ್ಥಿತಿಯಲ್ಲಿರುತ್ತದೆ. ಸದರಿ ಬಿಳಿ ಬಟ್ಟೆಯ ಸೀಲ್ ಆಗಿರುವ ಎರಡು ಪ್ಯಾಕುಗಳು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಗಿ ಅದರಲ್ಲಿರುವ ಟೀ ಶರ್ಟ್ ನ್ನು ಮು.ಮಾ-2 ಎಂದು ಮತ್ತು ಬರ್ಮುಡಾವನ್ನು ಮು.ಮಾ-3 ಎಂದು ಗುರುತಿಸಲಾಯಿತು. ಬಟ್ಟೆ ಕೊಡುವ ಸಮಯದಲ್ಲಿ ರಮೇಶ ಮತ್ತು ಕುಮಾರಸ್ವಾಮಿ ಮತ್ತೆ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಬಟ್ಟೆ ಕೊಡುವ ಸಮಯದಲ್ಲಿ ಪೊಟೋದಲ್ಲಿ ಇರುವವರು ಹಾಜರಿದ್ದರು ಅವರ ಹೆಸರು ಹೇಳಲು ಆಗುವುದಿಲ್ಲ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

ನಂತರ ನ್ಯಾಯಾಲಯದಲ್ಲಿ ನ್ಯಾಯಾಧೀಶರ ಮುಂದೆ ದಂ.ಪ್ರ.ಸಂಹಿತೆ ಕಲಂ 164(5)ರ ಅಡಿಯಲ್ಲಿ ಹೇಳಿಕೆ ಕೊಟ್ಟಿರುತ್ತೇನೆ. ನ್ಯಾಯಾಲಯದಲ್ಲಿರುವ ದಂ.ಪ್ರ.ಸಂಹಿತೆ ಕಲಂ 164(5)ರ ಅಡಿಯಲ್ಲಿ ಹೇಳಿಕೆ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಂ.ಪ್ರ.ಸಂಹಿತೆ ಕಲಂ 164(5)ರ ಅಡಿಯಲ್ಲಿ ಹೇಳಿಕೆ ನಿಪಿ-15 ಎಂದು, ಸಾಕ್ಷಿ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ಆ ದಿನ ನನ್ನ ಗಂಡನಿಗೆ ಸೂಳೆ ಮಗನ್ನ ಮುಗಿಸಬಿಡಬೇಕು ಎಂದು ಕೊಲೆ ಮಾಡಿರುತ್ತಾನೆ.

<u>ಪಾಟೀಸವಾಲು ಶ್ರೀ. ವಿ.ಆರ್.ಆರ್. ವಕೀಲರಿಂದ ಆರೋಪಿ ಪರವಾಗಿಃ-</u>

ನನ್ನ ಹೆಸರು ಪುಟ್ಟತಾಯಮ್ಮ, ನನ್ನನ್ನು ಪುಟ್ಟಮ್ಮ ಎಂದು ಕರೆಯುವುದಿಲ್ಲ. ಬಸಮ್ಮ ನನ್ನ ಗಂಡನಿಗೆ ಚಿಕ್ಕಮ್ಮ ಆಗಬೇಕು. ಆರೋಪಿ ನನಗೆ ಸಂಬಂಧದಲ್ಲಿ ಭಾವನಾಗಬೇಕು. ಆರೋಪಿಯ ತಾಯಿ ಮತ್ತು ನನ್ನ ಗಂಡನ ತಾಯಿ ಅಕ್ಕ ತಂಗಿಯರು ಎನ್ನುವುದು ನಿಜ. ನಮ್ಮ ಸ್ವಂತ ಊರು ತಿಪ್ಪನಹಳ್ಳಿ ಎನ್ನುವುದು ನಿಜ. ನನ್ನ ಗಂಡ ಮತ್ತು ಅವರ ತಾಯಿಯನ್ನು ಬಸಮ್ಮ ನೇ ತಿಪ್ಪನಹಳ್ಳಿಯಿಂದ ಬಂಡಿಪಾಳ್ಯಕ್ಕೆ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆಯಾಗುವುದಕ್ಕಿಂತ ಮೊದಲು ನನ್ನ ಅತ್ತೆ ಮತ್ತು ನನ್ನ ಗಂಡ ತಿಪ್ಪನಹಳ್ಳಿಯಲ್ಲಿ ವಾಸ ಇದ್ದರು. ನನ್ನ ಅತ್ತೆ ಮತ್ತು ನನ್ನ ಗಂಡನನ್ನು ಆರೋಪಿ ತಾಯಿ ಮನೆಯಲ್ಲಿ ಇಟ್ಟುಕೊಂಡು ಸಾಕಿ ಮನೆ ಕಟ್ಟಿಸಿಕೊಟ್ಟಿರುತ್ತಾರೆ ಎಂದರೆ ಸುಳ್ಳು, ಸಾಕ್ಷಿ ಸ್ವತಃ ಹೇಳುವುದೇನೆಂದರೆ ನನ್ನ ಅತ್ತೆ ಮಾವನೇ ಆರೋಪಿಗೆ ಮನೆ ಕಟ್ಟಿಸಿಕೊಟ್ಟಿರುತ್ತಾರೆ. ನನ್ನ ಮದುವೆ ಸಮಯದಲ್ಲಿ ನನ್ನ ಗಂಡನ ಆರೋಪಿತರ ಕುಟುಂಬದಲ್ಲಿ ವಾಸ ಮಾಡುತ್ತಿದ್ದ ಎಂದರೆ ಸುಳ್ಳು. ನನ್ನನ್ನು ನೋಡಿ ನನ್ನ ಅತ್ತೆ ಮತ್ತು ಆರೋಪಿಯ ತಾಯಿ ಮದುವೆಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮಾವ ನನ್ನನ್ನು ನೋಡಿ ಮದುವೆ ಮಾಡಿಸಿರುತ್ತಾರೆ. ನನ್ನ ಮದುವೆಗೆ ಅಣ್ಣ ತಮ್ಮಂದಿರು ಎನ್ನುವ ಸಂಬಂಧದಲ್ಲಿ ಆರೋಪಿಯ ತಾಯಿ ಬಂದು ಆಕ್ಷತೆ ಹಾಕಿರುತ್ತಾರೆ.

ಗಲಾಟೆ ಪ್ರಾರಂಭದಲ್ಲಿ ನಾನು ಮನೆಯಲ್ಲಿ ಇದ್ದೆ. ನಾನು ಸ್ಥಳಕ್ಕೆ ಹೋದಾಗ ಗಲಾಟೆ ಆಗುತ್ತಿತ್ತು ಆರೋಪಿ ಸೂಳೇಮಗನೆ ಎಂದು ಬೈದು ದೊಣ್ಣೆಯಿಂದ ಹೊಡೆಯುತ್ತಿದ್ದ. ಘಟನೆಯಾದ ಜಾಗದಿಂದ ನಮ್ಮ ಮನೆ ಮೂರು ಮನೆಗಳ ಅಂತರ ಇರುತ್ತದೆ. ನನ್ನ ಮಗ ಚಾಸಾ-1 ರವರನ್ನು ನಾನೇ ಸಾಕಿ ಬೆಳೆಸಿರುತ್ತೇನೆ. ನಮಗೆ ಬಂಡಿಪಾಳ್ಯದಲ್ಲಿ ಜಮೀನು ಇರುವುದಿಲ್ಲ. ನಮಗೆ ಮನೆ ಕಟ್ಟಿಸಿ ಜಮೀನು ಕೊಟ್ಟು ಆರೋಪಿಯ ತಾಯಿಯೇ ನಮ್ಮನ್ನು ಸಾಕಿರುತ್ತಾರೆ ಎಂದರೆ ಸುಳ್ಳು. ನನ್ನ ಗಂಡನ ರಮೇಶನಿಗೆ ಮೂರ್ಛೆ ರೋಗದ ಕಾಯಿಲೆ ಇತ್ತು ಎಂದರೆ ಸುಳ್ಳು. ಮೂರ್ಛೆ ರೋಗದ ಕಾಯಿಲೆಗೆ ನನ್ನ ಗಂಡನ ನಿಮಾನ್ಸ್ ನಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದ. ಮೂರ್ಛೆ ರೋಗದ ಕಾಯಿಲೆ ಇದದ್ದರಿಂದ ನನ್ನ ಗಂಡನನ್ನು ಆರೋಪಿ ಮತ್ತು ಆತನ ಅಣ್ಣ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸುಳ್ಳು.

ಆರೋಪಿ ಅಣ್ಣ ನಾಗರಾಜು ಗ್ರಾಮ ಪಂಚಾಯಿತಿ ಸದಸ್ಯ ಆಗಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ಚಾಸಾ-1 ರಿಂದ ಚಾಸಾ-3 ರವರು ಆರೋಪಿ ಅಣ್ಣ ನಾಗರಾಜು ವಿರುದ್ಧ ಕೆಲಸ ಮಾಡಿರುತ್ತಾರೆ ಎಂದರೆ ಸುಳ್ಳು. ಸದರಿ ಚುನಾವಣೆಯಲ್ಲಿ ರಾಮಯ್ಯನ ಅಣ್ಣ ನಾಗರಾಜು ಚುನಾವಣೆಯಲ್ಲಿ ಗೆದ್ದಿರುತ್ತಾನೆ ಮತ್ತು ಚಾಸಾ-1 ರಿಂದ 3 ರವರು ಕೆಲಸ ಮಾಡಿದವರು ಸೊತಿರುತ್ತಾರೆ ಎಂದರೆ ಸುಳ್ಳು. ಸದರಿ ದ್ವೇಷ ಇಟ್ಟುಕೊಂಡು ನನ್ನ ಮಗ ಹೇಳಿದಂತೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಾಗಿರುವುದು ಊರು ಮದ್ಯೆ ಎಂದರೆ ನಿಜ, ಸದರಿ ಜಾಗದಲ್ಲಿ ವಾಸದ ಮನೆಗಳು ಇರುತ್ತವೆ ಎಂದರೆ ನಿಜ. ಸದರಿ ಜಾಗದಲ್ಲಿ ಜನಸಂದಣಿ ಪ್ರದೇಶ ಎಂದರೆ ಸರಿಯಲ್ಲ. ನಾನು ಮನೆಯಿಂದ ಬಂದಾಗ ಆರೋಪಿ ಬಗ್ಗಿ ದೊಣ್ಣೆಯನ್ನು ತೆಗೆದುಕೊಂಡು ರಮೇಶನ ತಲೆಗೆ ದೊಣ್ಣೆಯಿಂದ ಹೋಡೆದಿರುತ್ತಾನೆ.

ಆ ದಿನ ನನ್ನ ಗಂಡನ ಮೂರ್ಛೆ ರೋಗದಿಂದ ನೆಲದ ಮೇಲೆ ಬಿದಿದ್ದ ಆತನನ್ನು ಉಪಚರಿಸಲು ಆರೋಪಿ ಮತ್ತು ಆತನ ಅಣ್ಣ ಹೋಗಿದ್ದರು ಎಂದರೆ ಸುಳ್ಳು. ಮೂರ್ಛೆ ನನ್ನ

ಗಂಡನನುನ ಮನೆಗೆ ಕರೆದುಕೊಂಡು ಹೋಗಿ ಸ್ನಾನ ಮಾಡಿಸಿದ್ದರಿಂದ ಆತನ ಆರೋಗ್ಯದಲ್ಲಿ ಏರು ಪೇರು ಆಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದರೆ ಸುಳ್ಳು. ಘಟನೆಯಾದ 6-7 ದಿನಕ್ಕೆ ನನ್ನ ಗಂಡ ತೀರಿಕೊಂಡಿರುತ್ತಾನೆ. ಆದರೆ ನನಗೆ ದಿನಾಂಕ ತಿಂಗಳು ಹೇಳಲು ಬರುವುದಿಲ್ಲ. ಆ ದಿನ ಆಸ್ಪತ್ರೆಗೆ ಕಾರಿನಲ್ಲಿ , ನಾನು , ಲಕ್ಷ್ಮೀಕಾಂತ ಮತ್ತು ದಿನೇಶ ತುಮಕೂರು ಆಸ್ಪತ್ರೆಗೆ ಹೋಗಿರುತ್ತೇವೆ. ನನ್ನ ಜೊತೆ ಚಾಸಾ-2 ರವರು ಆಸ್ಪತ್ರೆಗೆ ಬಂದಿರಲ್ಲಿ ಎಂದರೆ ಸರಿಯಲ್ಲ. ನಾನು ನನ್ನ ಹೇಳಿಕೆಯಲ್ಲಿ ಚಾಸಾ-1 ರಿಂದ 3 ರವರು ನನ್ನ ಜೊತೆ ಆಸ್ಪತ್ರೆಗೆ ಬಂದಿರುತ್ತಾರೆಂದು ಹೇಳಿರುತ್ತೇನೆ.

ನಾನು ಬಟ್ಟೆಯನ್ನು ಬಡವನಹಳ್ಳಿ ಪೊಲೀಸ್ ಠಾಣೆಗೆ ಕೊಟ್ಟಿರುತ್ತೇನೆ. ನಾನು ಬಡವನಹಳ್ಳಿ ಪೊಲೀಸ್ ಠಾಣೆಗೆ ಬಟ್ಟೆ ಹಾಜರುಪಡಿಸಿದಾಗ ನಟರಾಜು ಮತ್ತು ರಮೇಶ ಹಾಜರಿದ್ದರು ಮತ್ತೆ ಬೇರೆ ಯಾರು ಹಾಜರಿದ್ದರು ಎಂದು ಹೇಳಲು ಆಗುವುದಿಲ್ಲ. ನಾನು ಆ ದಿನ ಯಾವುದೇ ಘಟನೆಯನ್ನು ಕಣ್ಣಾರೆ ನೋಡಿರುವುದಿಲ್ಲ ಆರೋಪಿ ಮತ್ತು ಅವರ ಕುಟುಂಬಕ್ಕೆ ತೊಂದರೆ ಕೊಡಬೇಕು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ಬಟ್ಟೆ ಹಾಜರುಪಡಿಸಿರುವುದಿಲ್ಲ ಮತ್ತು ಪೊಲೀಸರು ನನ್ನ ಸಮಕ್ಷಮ ಅಮಾನತ್ತು ಪಂಚನಾಮೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ದೊಣ್ಣೆಯಿಂದ ಆರೋಪಿ ನನ್ನ ಗಂಡನಿಗೆ ಹೊಡೆದಿಲ್ಲವಾದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**